## ಅಮೆರಿಕೆಯಲ್ಲಿ!

ಅಂದು ಭಾನುವಾರ.
ಆ ಕೆಲಸಕ್ಕೆ ಅಂದೇ ಸರಿಯಾದ ದಿವಸ.
ಸರಿ, ಹೊರಟೆ. ಅಲ್ಲೂ ಸರದಿಯ ಸಾಲಿತ್ತು.
ಆದರೆ ಕಡಿಮೆ ಜನವಿದ್ದರು.
ಹಾಗೂ ಹೀಗೂ ನನ್ನ ಸರದಿ ಬಂದಾಗ
ಸಿಂಹಾಸನವನ್ನೇರಿದೆ.
ಸೀನ ತಲೆಯ ಮೇಲೆ ಕೈಯಾಡಿಸತೊಡಗಿದ.
ಅಲ್ಲಿದ್ದವರೊಬ್ಬರ ಮೊಬೈಲ್ ರಿಂಗ್ ಆಯ್ತು.
'ಎಲ್ಲಿದೀಯೋ?' ಅತ್ತಲಿಂದ ದನಿ.
'ನಾನಾ... ಅಮೆರಿಕಾದಲ್ಲಿ' ಎಂದ.
'ಅದ್ಯಾವಾಗ ಹೋದ್ಯೋ ಬಡ್ಡೆತ್ತದೆ?'
'ಹಿ ಹಿ ಹಿ' ಎಂದು ನಕ್ಕ.
'ಯಾವಾಗ ವಾಪಸ್ ಬತ್ತೀಯ?'
'ರಾಮಸ್ವಾಮಿ ಸರ್ಕಲ್ ಬಳಿ
ಇರೋ ಅಮೆರಿಕನ್ ಹೇರ್ ಕಟಿಂಗ್
ಸಲೂನ್ ಕಣ್ಲಾ...'
'ಅಯ್ಯೋ ಬಡ್ಡೀ ಮಗ್ನೆ ಇದೇನಪ್ಪಾ,
ಪಾಸ್‌ಪೋರ್ಟ್ ಇಲ್ಲಾ... ವೀಸಾ ಇಲ್ಲಾ
ಅಮೆರಿಕಾಗೆ ಹೆಂಗ್ ಹೋದ ಅಂತ ಆಶ್ಚರ್ಯ
ಆಯ್ತು ಕಣ್ಲಾ...' ಎಂದವನು ಫೋನ್ ಕಟ್
ಮಾಡಿದ. ನಾನು ನಗುತ್ತ ಮನೆ ಕಡೆ ಹೋದೆ.

**ಕೊ.ಸು. ನರಸಿಂಹ ಮೂರ್ತಿ**





## ಮುಖ ತಲೆ ತೆಗೆದ...

ಗೆಳೆಯ ರಾಜೀವ್ ತನ್ನ ಮನೆಯ ಸಮಾರಂಭ ಒಂದರಲ್ಲಿ ತನ್ನ 10 ವರ್ಷದ ಮಗನ ಕೈಗೆ ಕ್ಯಾಮೆರಾ ಕೊಟ್ಟು 'ಚೆನ್ನಾಗಿ ಫೋಟೊ ತೆಗಿಬೇಕು. ಮುಖ ತಲೆ ತೆಗಿಬೇಕು ಆಯ್ತಾ?' ಎಂದು ಆದೇಶ ನೀಡಿದ. ಸಮಾರಂಭವೆಲ್ಲ ಮುಗಿದ ಮೇಲೆ ಮಗ ತೆಗೆದಿದ್ದ ಫೋಟೊ ನೋಡೋಣ ಎಂದು ಕ್ಯಾಮೆರಾ ಆನ್ ಮಾಡಿ ನೋಡಿದ. ಯಾವ ಫೋಟೊದಲ್ಲೂ ಒಬ್ಬರದೂ ಮುಖವೇ ಕಾಣುತ್ತಿಲ್ಲ! 'ಏನೊ ಇದು? ಯಾವ ಫೋಟೊದಲ್ಲೂ ಯಾರದೂ ಮುಖ, ತಲೇನೇ ಕಾಣ್ತಾ ಇಲ್ಲ?' ಎಂದು ಕೇಳಿದ. 'ನೀವೇ ಹೇಳಿದಿರಲ್ಲ ಅಪ್ಪ, ಮುಖ, ತಲೆ ತೆಗಿ ಅಂತ... ಅದಕ್ಕೆ ನಾನು ಅವೆರಡೂ ಕಾಣದಂತೆ ಕುತ್ತಿಗೆಯಿಂದ ಕೆಳಗೆ ಮಾತ್ರ ಫೋಟೊ ತೆಗೆದೆ' ಎಂದಾಗ ರಾಜೀವನ ಮುಖ ನೋಡುವಂತಿರಲಿಲ್ಲ.

**ಎಂ.ಆರ್. ರಘುನಾಥ್**

ಚಿತ್ರಗಳು: ಗಣೇಶ ಆಚಾರ್ಯ